CW.7 PW.6

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.1494/2017

| | |
|---|---|
| ಸಾಕ್ಷಿದಾರರ ಹೆಸರು | ವಿ ನಾರಾಯಣ್ |
| ತಂದೆಯ ಹೆಸರು | ಲೇಟ್ ವೆಂಕಟೇಗೌಡ |
| ವಯಸ್ಸು | 65 ವರ್ಷ |
| ವೃತ್ತಿ | ನಿವೃತ್ತ ಸಂಚಾರಿ ನಿಯಂತ್ರಕರು |
| ವಿಳಾಸ | ಕನಕಪುರ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 06.11.2025 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ನಾನು 1986 ರಿಂದ 2021 ರವರೆಗೂ ನಾನು ಸಂಚಾರಿ ನಿಯಂತ್ರಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಆರೋಪಿಯನ್ನು ನೋಡಿರುತ್ತೇನೆ. ಆತನು ನಮ್ಮ ಇಲಾಖೆಯ ಚಾಲಕನಾಗಿರುತ್ತಾನೆ. ಚಾಸಾ-1 ರಿಂದ ಚಾಸಾ-6 ಮತ್ತು ಚಾಸಾ-8 ರಿಂದ ಚಾಸಾ-10 ರವರ ಪೈಕಿ ಚಾಸಾ-6 ಮತ್ತು ಚಾಸಾ-8, ಚಾಸಾ-10 ರವರು ಮಾತ್ರ ಗೊತ್ತಿರುತ್ತಾರೆ.

ದಿಃ08.09.2017 ರಲ್ಲಿ ಒಂದು ಅಪಘಾತವಾಗಿದ್ದು ಅದರಲ್ಲಿ ನಮ್ಮ ಇಲಾಖೆಯ ಬಸ್ ಕೆಎ-42-ಎಫ್-610 ಸದರಿ ಬಸ್ ಗೂ ಹಾಗೂ ಮತ್ತೊಂದು ದ್ವಿಚಕ್ರ ವಾಹನಕ್ಕೂ ಅಪಘಾತವಾಗಿರುತ್ತದೆಂದು ತಿಳಿಸಿದ್ದು ಬಸ್ ನ್ನು ಪೋಲೀಸರು ಅಮಾನತು ಪಡಿಸಿಕೊಂಡಿರುತ್ತಾರೆ ಎಂದು

ತಿಳಿಸಿರುತ್ತಾರೆ. ನಾನು ಬಸ್ ಗೆ ಸಂಬಂಧಿಸಿದಂತೆ ಐಎಂವಿ ಮಾಡಿಸಿ ನಂತರ ಸಂಬಂಧಪಟ್ಟ ದಾಖಲಾತಿಗಳನ್ನು ನೀಡಿ ಬಾಂಡ್ ಮುಖಾಂತರ ಗಾಡಿಯನ್ನು ವಶಕ್ಕೆ ಪಡೆದುಕೊಂಡಿರುತ್ತೇನೆ.

ಸಾಕ್ಷಿಗೆ ಸದರಿ ಪ್ರಕರಣದ ಇಂಡಿನಟಿ ಬಾಂಡ್ ನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-7 ಎಂದು ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿದಾರ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸ.ಸ ಅ ರವರು ಸಾಕ್ಷಿಯನ್ನು ಪಾಟೀ ಸವಾಲನ್ನು ಮಾಡಲು ಅನುಮತಿ ನೀಡಲು ಕೋರಿದ ಮೇರೆಗೆ ಅನುಮತಿ ನೀಡಲಾಯಿತು).**

**ಪಾಟೀ ಸವಾಲುಃ ಸ. ಸ. ಅ. ರವರಿಂದ**

ಸಾಕ್ಷಿಗೆ ನಿಪಿ-6 ರ ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಗೆ ತಾನು ಹಾಜರಿದ್ದು ಸಹಿ ಮಾಡಿರುವುದಾಗಿ ನುಡಿಯುತ್ತಾರೆ. ಸಾಕ್ಷಿಯ ಸಹಿಯನ್ನು ಈಗ ನಿಪಿ-6(ಬಿ) ಎಂದು ಗುರುತಿಸಲಾಯಿತು. ಸದರಿ ನಿಪಿ-6 ನ್ನು ತಯಾರು ಮಾಡುವಾಗ ನನ್ನ ಜೊತೆ ಚಾಸಾ-6 ಮತ್ತು ಚಾಸಾ-8 ರವರು ಹಾಜರಿದ್ದರು ಎಂದರೆ ಸರಿ. ಸದರಿ ಕೆ ಎಸ್ ಆರ್ ಟಿ ಸಿ ಬಸ್ ಸುಮಾರವರು ಚಲಾಯಿಸುತ್ತಿದ್ದ ದ್ವಿಚಕ್ರ ವಾಹನಕ್ಕೆ ಗುದ್ದಿ ಅಪಘಾತ ಪಡಿಸಿದ ಪರಿಣಾಮ ಅವರಿಗೆ ಪೆಟ್ಟು ಗಳಾಗಿದ್ದು ಈ ಎಲ್ಲಾ ವಿಷಯಗಳನ್ನು ತಿಳಿಸಿ ನಿಪಿ-6 ನ್ನು ಪೋಲೀಸರು ತಯಾರಿಸಿರುತ್ತಾರೆಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ಸದರಿ ದಿನ ಸಂಜೆ 6.30 ಗಂಟೆಗೆ ನಮ್ಮ ಡಿಪೋ ಮ್ಯಾನೇಜರ್ ಅಪಘಾತದ ವಿಚಾರವನ್ನು ತಿಳಿಸಿರುತ್ತಾರೆ. ನಾನು ಸ್ಥಳಕ್ಕೆ ಹೋಗಿ ನೋಡಲಾಗಿ ಬಸ್ ಗೆ ಯಾವುದೇ ರೀತಿ ಹಾನಿ ಆಗಿರುವುದು ಕಂಡು ಬಂದಿರುವುದಿಲ್ಲ. ಮತ್ತೊಂದು ವಾಹನಕ್ಕೆ ಏನಾಗಿತ್ತು ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ

ಸರಿ. ಸದರಿ ಬಸ್ ಸದರಿ ದಿನ ಪ್ರಸ್ತುತ ಹಾದಿಯಲ್ಲಿ 10 ಗಂಟೆಗೆ ಬರಬೇಕಾದ ಕಾರಣ ಅಲ್ಲಿ ಸಾಗುತ್ತಿತುತ ಎಂದರೆ ಸರಿ. ಪಂಚರನ್ನು ನಾನು ಕರೆದುಕೊಂಡು ಹೋಗಿರಲಿಲ್ಲ ಅವರನ್ನು ಪೋಲೀಸರೇ ಕರೆಸಿದ್ದರು. ಮಹಜರ್ ನ್ನು ಯಾರು ತಯಾರು ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ಅದನ್ನು ತಯಾರು ಮಾಡುವ ಸಮಯದಲ್ಲಿ ಸುಮಾರು 11 ಗಂಟೆಯಾಗಿರಬಹುದು ಸಮಯ ಸರಿಯಾಗಿ ಗೊತ್ತಿಲ್ಲ. ಟೈಪ್ ಮಾಡಿರುವ ಬಗ್ಗೆ ಮಾಹಿತಿ ಇಲ್ಲ. ಅವರು ಹೊರಗಡೆಯಿಂದ ಟೈಪ್ ಮಾಡಿಸಿಕೊಂಡು ಬಂದು ನಮ್ಮ ಸಹಿ ಪಡೆದಿರುತ್ತಾರೆಂದು ನುಡಿಯುತ್ತಾರೆ. ಕೇವಲ ಪೋಲೀಸರ ಮಾತನ್ನು ಕೇಳಿ ಸದರಿ ಬಸ್ ನಿಂದ ಯಾವುದೇ ಅಪಘಾತವಾಗದೇ ಇದ್ದರೂ ಸಹಿತ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**